ದಿನನಿತ್ಯದ ಸಾಮಗ್ರಿಗಳ ಖರೀದಿ

913 (1350); ಶ್ರೀ ಗುರುಪಾದಗೌಡ ಸಂಗನಗೌಡ (ರೋಣ)

(ಅ) ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ದಿನ ನಿತ್ಯ ನಗರವನ್ನು ಸ್ವಚ್ಛ ಇಡಲು ಉಪಯೋಗಕ್ಕೆ ಬರತಕ್ಕಂತಹ ಜೆ.ಸಿ.ಬಿ. ಇತ್ಯಾದಿ ಸಾಮಗ್ರಿಗಳನ್ನು ಖರೀದಿ ಮಾಡಲು ಇರುವ ಮಾನದಂಡ ಗಳೇನು;

(ಆ) ಹಾಗಿದ್ದಲ್ಲಿ, ಗದಗ ಜಿಲ್ಲೆ, ರೋಣ ಪುರಸಭೆಗೆ ಇವರೆಗೂ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು;

(ಇ) ಸರ್ಕಾರದ ಮುಂದೆ ಇಂತಹ ಖರೀದಿ ಕಾರ್ಯಗಳ ಶೀಘ್ರ ಅನುಷ್ಠಾನ ಕ್ಕಾಗಿ ಕಾಯ್ದೆಯಲ್ಲಿ ಸರಳೀಕರಣ ಮಾಡುವಂತಹ ಚಿಂತನೆ ಏನಾದರೂ ಸರ್ಕಾರದ ಮುಂದಿದೆಯೇ?

ಡಾ. ಖಮರುಲ್ಲ ಇಸ್ಲಾಂ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

(ಅ) ನಗರ ಸ್ಥಳೀಯ ಸಂಸ್ಥೆಗಳು ರೂ. 5000 ಕ್ಕಿಂತ ಹೆಚ್ಚಿನ ಬೆಲೆಯ ಸಾಮಗ್ರಿಗಳನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶ ಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ರೀತ್ಯಾ (ಕೆ.ಟಿ.ಪಿ.ಪಿ. ನಿಯಮಾವಳಿಗಳು) ಟೆಂಡರ್ ಕರೆದು ಖರೀದಿಸಬೇಕಿ ರುತ್ತದೆ.

(ಆ) ಆ ಕುರಿತು ಮುಖ್ಯಾಧಿಕಾರಿಗಳು, ಪುರಸಭೆ ರೋಣರವರಿಂದ ವರದಿ ಯನ್ನು ಪಡೆದಿದ್ದು, ವಿಳಂಬಕ್ಕೆ ವಿವರಗಳು ಕೆಳಗಿನಂತಿವೆ.

ರೋಣ ಪುರಸಭೆಗೆ ಹೊಸದಾಗಿ ಇ–ಪ್ರೋಕ್ಯೂರುಮೆಂಟ್ ಮೂಲಕ ಸಾಮಗ್ರಿಗಳನ್ನು 2013–14ನೇ ಸಾಲಿನಲ್ಲಿ ಖರೀದಿಸಲು ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿತ್ತು. ಈ ಬಗ್ಗೆ ಸಾಮಗ್ರಿಗಳನ್ನು ಖರೀದಿಸಲು ಪೌರಾ

ಡಳಿತ ನಿರ್ದೇಶನಾಲಯದಿಂದ ಆಡಳಿತಾತ್ಮಕ ಅನುಮೋದನೆ ಪಡೆಯದೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿತ್ತು. ಈ ಬಗ್ಗೆ ನಿರ್ದೇಶನಾಲಯದ ಸೂಚನೆಗಳನ್ವಯ ಆಡಳಿತಾತ್ಮಕ ನಿರ್ದೇಶನಾಲಯದಿಂದ ಪಡೆದು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ.

ಆದರೆ ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ವಾಹನ ಸಲಕರಣೆಗಳನ್ನು ಖರೀದಿಸಲು ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಸರಿಯಾಗಿ ಮ್ಯಾಪಿಂಗ್ ಆಗಿಲ್ಲದ ಕಾರಣ ವಿಳಂಬವಾಗಿತ್ತು, ಈ ದೋಷಗಳನ್ನು ಸರಿಪಡಿಸಿಕೊಂಡು ಈಗಾಗಲೇ ಅಲ್ಪಾವಧಿ ಟೆಂಡರ್ ಪ್ರಕಟಣೆ ನೀಡಲಾಗಿದೆಯೆಂದು ಮುಖ್ಯಾಧಿಕಾರಿಗಳು ಪುರಸಭೆ ರೋಣ ಇವರು ವರದಿ ಮಾಡಿರುತ್ತಾರೆ.

(ಇ) ಖರೀದಿ ಪ್ರಕ್ರಿಯೆ ಕುರಿತಂತೆ ಈಗಾಗಲೇ ಕೆ.ಟಿ.ಪಿ.ಪಿ ಕಾಯ್ದೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದು ಕಾಯ್ದೆಯನ್ನು ಸರಳೀಕರಣಗೊಳಿಸಲಾಗಿದೆ. ಅದರಂತೆ ಆರ್ಥಿಕ ಇಲಾಖೆಯ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುಕೂಲವಾಗಲೆಂದು ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ್‌ಗಳನ್ನು ಸಿದ್ದಪಡಿಸಿರುತ್ತಾರೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಕೆ.ಟಿ.ಪಿ.ಪಿ. ನಿಯಮಾವಳಿಗಳು ಹಾಗೂ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆ ಕುರಿತಂತೆ ಸಾಕಷ್ಟು ತರಬೇತಿಯನ್ನು ನೀಡಲಾಗಿರುತ್ತದೆ.

ನಗರೋತ್ಥಾನ ಯೋಜನೆಯ ಅನುಷ್ಠಾನದಲ್ಲಿ ವಿಳಂಬ

914 (1687); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ನಗರೋತ್ಥಾನ ಯೋಜನೆಯಡಿಯಲ್ಲಿ ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಇದರ ಅನುಷ್ಠಾನಕ್ಕಾಗಿ